ಮೊದಲ ತಲೆಮಾರಿನ ಶಾಲಾ ಮಕ್ಕಳಿಗೆ ಕಲಿಸುವುದು | ಪ್ರಮುಖ ಕಲಿಕೆಗಳು

ವಿದ್ಯಾ ದಾಸ್

ಬಹುತೇಕ ಮಕ್ಕಳು ಅತ್ತಿಂದಿತ್ತ ಓಡಾಡುತ್ತಿರಲಿಲ್ಲವಾದರೂ, ಚೈತನ್ಯದಿಂದ ಪುಟಿಯುತ್ತಿದ್ದ ಈ ಮಕ್ಕಳು ಮಾತ್ರ ತಮ್ಮ ಸ್ಥಳಗಳಲ್ಲಿ ಕೂರಲು ಇಷ್ಟಪಡದೆ ಅಡ್ಡಾಡುತ್ತಿದ್ದರು. ಕೇವಲ ಐದಾರು ಮಕ್ಕಳಷ್ಟೇ ಸ್ವಲ್ಪ ತುಂಟಾಟ ಮಾಡುತ್ತಾ ಗದ್ದಲವೆಬ್ಬಿಸಿದ್ದರು. ನಾನು ಹೋಗಿ ಆ ಮಕ್ಕಳ ಪಕ್ಕ ಸುಮ್ಮನೆ ಕುಳಿತೆ. ಆ ತುಂಟ ಮಕ್ಕಳು ತಾವು ಬರೆದಿದ್ದನ್ನು ತೋರಿಸಲು ನನ್ನ ಬಳಿ ಬಂದರು. ಅವರಲ್ಲಿ ಹಲವು ಮಕ್ಕಳು ನನ್ನ ಗಮನವನ್ನು ಸೆಳೆಯುವುದಕ್ಕೆ ಕಾತರರಾಗಿದ್ದರೇ ಹೊರತು ತಮ್ಮ ಕೆಲಸವನ್ನು ಮುಗಿಸಿರಲಿಲ್ಲ. ಅವರ ಸರದಿ ಬಂದಾಗ ಅವರ ಕೆಲಸವನ್ನು ನೋಡಲು ನಾನೇ ಬರುತ್ತೇನೆಂದು ಸ್ಪಷ್ಟವಾಗಿ ಹೇಳಿದೆ. ಅವರಲ್ಲಿ ಅತ್ಯಂತ ಕಿರಿಯವಳು ತನ್ನ ಸ್ಥಳಕ್ಕೆ ನನ್ನನ್ನು ಎಳೆದೊಯ್ಯಲು ಪ್ರಯತ್ನಿಸಿದಳು. ಅವಳು ಹಾಗೆ ಮಾಡಬಾರದೆಂದೂ ನಾನು ಅವರ ಮುಖ್ಯ ಶಿಕ್ಷಕಿ ಎಂದು ಮತ್ತೊಂದು ಮಗು ಅವಳಿಗೆ ವಿವರಿಸಿದಳು, ಬಳಿಕ ಆ ಮಗು ನನ್ನನ್ನು ಎಳೆಯುವುದನ್ನು ನಿಲ್ಲಿಸಿದಳು, ಎಲ್ಲರೂ ತಮ್ಮ ತಮ್ಮ ಜಾಗಕ್ಕೆ ಹಿಂದಿರುಗಿದರು.

ಒಂದು ಬುಡಕಟ್ಟು ಪ್ರದೇಶದಲ್ಲಿ ಮೊದಲ ತಲೆಮಾರಿನ ಕಲಿಕಾರ್ಥಿಗಳೆಂದು ಸಾಮಾನ್ಯವಾಗಿ ಗುರುತಿಸುವ, ಮೊದಲ ಪೀಳಿಗೆಯ ಶಾಲಾ ಮಕ್ಕಳಿಗಾಗಿ ಇರುವ **ಅಗ್ರಗಾಮಿ** ಶಾಲೆಯ ಎರಡನೇ ತರಗತಿಗೆ ಹೋಗಿದ್ದೆ. ಮಕ್ಕಳು ಹುಟ್ಟಿದ ಕ್ಷಣದಿಂದಲೇ ಕಲಿಕಾರ್ಥಿಗಳಾಗಿರುತ್ತಾರೆ. ಇವರ ಪೋಷಕರು ಎಂದಿಗೂ ಶಾಲೆಗೆ ಹೋಗಿಯೇ ಇಲ್ಲದಿರುವುದರಿಂದ ಈ ಮಕ್ಕಳಿಗೆ ಶಾಲಾ ಶಿಕ್ಷಣ ಒಂದು ಸವಾಲಿನ ಸಂಗತಿಯಾಗಿರುತ್ತದೆ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಬಲವಂತವಾಗಿ ಮತ್ತು ಒತ್ತಡ ಹೇರಿ ಪಠ್ಯ ವಿಷಯಗಳನ್ನು ಹೇರಲು ಪ್ರಯತ್ನಿಸುವುದರಿಂದ ಈ ಮಕ್ಕಳು ಸಂಪೂರ್ಣ ವಿಧೇಯರೂ, ನಮ್ರರಾಗುವಂತೆ ಮಾಡಲಾಗುತ್ತದೆ. ಇನ್ನು ಕೆಲವೆಡೆ ಶಿಕ್ಷಕರು ಈ ಮಕ್ಕಳು ಕಲಿಯಲಾರರು ಎಂದು ನಿರ್ಧರಿಸಿ ಕೈಚೆಲ್ಲುವುದರಿಂದ ಕಲಿಕೆ ಬಹುತೇಕ ಸಾಧ್ಯವಾಗುವುದೇ ಇಲ್ಲ. ಈ ಎರಡೂ ಸನ್ನಿವೇಶಗಳು ಒಟ್ಟಿಗೆ ಸಂಭವಿಸುವುದು ಅಪರೂಪವೇನಲ್ಲ, ಕಲಿಕೆ ಬಹುತೇಕ ಇಲ್ಲದಿರುವುದು ಮತ್ತು ಇದರ ಜೊತೆಗೆ ಮಕ್ಕಳನ್ನು ಒಂದು ರೀತಿಯ ಭಯ, ಕೀಳರಿಮೆ ಮತ್ತು ವಿಧೇಯತೆಯ ಭಾವನೆಗಳಿಗೆ ಒಗ್ಗಿಸಲಾಗುತ್ತದೆ. **ಅಗ್ರಗಾಮಿ** ಶಾಲೆಯಲ್ಲಿ ಈ ಮಕ್ಕಳು ಭಯಮುಕ್ತ ಅಥವಾ ಒತ್ತಡರಹಿತ ವಾತಾವರಣದಲ್ಲಿ ಕಲಿಯಲು ಸಹಾಯ ಮಾಡಲಾಗುತ್ತದೆ.

ಈಗಲೂ ದಾಖಲಾತಿ, ಶಾಲೆಯಿಂದ ಹೊರಬೀಳುವುದು ಮತ್ತು ಶೌಚಾಲಯಗಳ ಬಗ್ಗೆಯೇ ವ್ಯವಸ್ಥೆಯು ಹೆಚ್ಚಿನ ಗಮನ ನೀಡುತ್ತಿದ್ದರೂ, ಮೊದಲ ತಲೆಮಾರಿನ ಶಾಲಾ ಮಕ್ಕಳಿಗೆ ಶೈಕ್ಷಣಿಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ನೆರವು ನೀಡುವುದರಲ್ಲಿ ಇರುವ ಹಲವಾರು ಸವಾಲುಗಳನ್ನು ಇತ್ತೀಚೆಗೆ ಗುರುತಿಸಲಾಗುತ್ತಿದೆ. ಈ ಗುಣಾತ್ಮಕ ಸೂಚನೆಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಹೊಂದಿದ್ದರೂ ಅವನ್ನೇ ನಾವು ಶಿಕ್ಷಣದ ಗಮ್ಯ ಎಂದು ಪರಿಗಣಿಸಬಾರದು. ಉದಾಹರಣೆಗೆ ಸರ್ಕಾರದ ದಾಖಲೆಗಳ ಪ್ರಕಾರ ಈಗ ನಾವು ಸುಮಾರು ಶೇಕಡಾ ನೂರರಷ್ಟು ದಾಖಲಾತಿ ಸಾಧಿಸುತ್ತಿದ್ದೇವೆ. ಆದರೆ ಕಲಿಕೆಯ ಮಟ್ಟ ನಿಕೃಷ್ಟವಾಗಿದ್ದರೆ ದಾಖಲಾತಿಯ ಪ್ರಯೋಜನವಾದರೂ ಏನು? ಬಹುಪಾಲು ಮಕ್ಕಳು ಪ್ರಾಥಮಿಕ ಶಾಲೆಯ ಕೊನೆಯಲ್ಲಿಯೂ ಓದಲು ಕೂಡ ಸಮರ್ಥರಿರುವುದಿಲ್ಲ. ಈ ಹಂತದ ಇನ್ನುಳಿದ ಬಹುತೇಕರು ಕೇವಲ ಪ್ರಾಥಮಿಕ ಓದುವ ಸಾಮರ್ಥ್ಯವನ್ನಷ್ಟೇ ಹೊಂದಿರುತ್ತಾರೆ.

ಒಂದು ಮಗುವು ಸುಲಲಿತವಾಗಿ ಓದಲು ಕಲಿತ ಮೇಲಷ್ಟೇ ಹೆಚ್ಚಿನ ಎಲ್ಲಾ ಶಾಲಾ ಕಲಿಕೆಯು ಆರಂಭವಾಗುವುದು. ಶಾಲೆಯಲ್ಲಿ ಬಹುತೇಕ ಎಲ್ಲವೂ ಪುಸ್ತಕದಿಂದಲೇ ಕೂಡಿರುವುದರಿಂದ ಒಂದು ಮಗುವು ಸುಲಲಿತವಾಗಿ ಓದದಿದ್ದರೆ, ಓದಿದ್ದರ ಅರ್ಥಗ್ರಹಿಕೆ ಆಗದಿದ್ದರೆ ಶಾಲಾ ಕಲಿಕೆ ಆರಂಭವಾಗುವುದಿಲ್ಲ. ಹಾಗಾಗಿ ಯಾವುದೇ ವಿಷಯದ ಕಲಿಕೆಯು ಓದುವುದರ ಮೇಲೆ ಅವಲಂಬಿತವಾಗಿದೆ. ಒಂದು ಮಗುವಿಗೆ ಚೆನ್ನಾಗಿ ಮತ್ತು ಸಮಯಕ್ಕೆ ಸರಿಯಾಗಿ ಓದಲು ಸಾಧ್ಯವಿಲ್ಲದಿದ್ದರೆ ಆ ಮಗುವಿಗೆ ಸಮಾನ ಅವಕಾಶಗಳನ್ನು ನಿರಾಕರಿಸಲಾಗುತ್ತದೆ. ಎಲ್ಲಾ ರೀತಿಯ ಔಪಚಾರಿಕ ಶಿಕ್ಷಣಕ್ಕೂ ಓದುವಿಕೆಯೇ ಮೂಲಾಧಾರ. ಯಾವ ಮಗು ಬೇಗನೆ ಮತ್ತು ಸುಲಲಿತವಾಗಿ ಓದುವುದನ್ನು ಕಲಿಯುವುದಿಲ್ಲವೋ ಅದು ಇತರ ಜ್ಞಾನ ಮತ್ತು ಕೌಶಲ್ಯಗಳಲ್ಲಿ ಸುಲಭವಾಗಿ ಪರಿಣತಿಯನ್ನು ಪಡೆಯಲಾರದು ಮತ್ತು ಶಾಲೆಯಲ್ಲಿ ಚೆನ್ನಾಗಿ ಸಾಧನೆ ಮಾಡಲಾರದು ಎಂಬುದನ್ನು ಧಿರ್ ಜಿಂಗರಾನಿ ಅವರು ಒತ್ತಿ ಹೇಳುತ್ತಾರೆ. ಯಾವ ಮಕ್ಕಳು ತಡವಾಗಿ ಓದಲು ಕಲಿಯುತ್ತಾರೆ ಅಥವಾ ನಿಧಾನವಾಗಿ ಓದುತ್ತಾರೋ ಅವರು ಓದುವುದನ್ನು ತಪ್ಪಿಸಿಕೊಳ್ಳುತ್ತಾರೆ ಮತ್ತು ಅವರು ತಮ್ಮ ತರಗತಿಯ ಪಠ್ಯಪುಸ್ತಕಗಳನ್ನು ಓದಲಾರರು. ಅವರು ಶಾಲೆಯ ಬಗ್ಗೆ ಋಣಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾರೆ ಹಾಗೂ ಶಾಲಾ ಶಿಕ್ಷಣವನ್ನು ಪೂರೈಸುವ ಸಾಧ್ಯತೆಗಳು ಕಡಿಮೆ!

ಹಾಗಾಗಿ ಮೊದಲ ತಲೆಮಾರಿನ ಶಾಲಾ ಮಕ್ಕಳು ಶಾಲೆಗೆ ದಾಖಲಾದರೂ ಕೂಡ ಶಾಲೆಯಿಂದ ಬೇಗನೆ ಹೊರಬೀಳುವುದು ಹೆಚ್ಚು. ಪ್ರಾಥಮಿಕ ಶಾಲಾ ಹಂತದಲ್ಲಿ ಈ ವ್ಯತ್ಯಾಸ ಎದ್ದು ಕಾಣುತ್ತದೆ. ಈ ಮಕ್ಕಳು ಕಡಿಮೆ ಹಾಜರಾತಿ, ಕೆಳಮಟ್ಟದ ಸಾಧನೆ, ಓದಿನಲ್ಲಿ ತೊಂದರೆ ಮತ್ತು ಕಡಿಮೆ ಆತ್ಮಗೌರವ ಹೊಂದಿರುವುದಾಗಿ ವರದಿಗಳು ಸೂಚಿಸುತ್ತವೆ. ಪಠ್ಯಕ್ರಮ, ಮನೆಗೆಲಸವನ್ನು ಪೂರ್ಣಗೊಳಿಸುವುದು, ವೇಳಾಪಟ್ಟಿ ಮತ್ತು ಅಧ್ಯಾಪನಕ್ಕೆ ಹೊಂದಿಕೊಳ್ಳುವುದು ಇವುಗಳಲ್ಲಿ ಮಕ್ಕಳು ಸಮಸ್ಯೆಗಳನ್ನೆದುರಿಸುತ್ತಾರೆ ಎಂದು ಕೂಡಾ ವರದಿ ಹೇಳುತ್ತದೆ. ಇತರ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಎರಡು ಪಟ್ಟಿಗಿಂತಲೂ ಹೆಚ್ಚಿನ ಸಂಖ್ಯೆಯ ಮೊದಲ ತಲೆಮಾರಿನ ವಿದ್ಯಾರ್ಥಿಗಳು ಶಾಲಾ ಶಿಕ್ಷಣದಲ್ಲಿ ಸವಾಲುಗಳನ್ನು ಎದುರಿಸುತ್ತಾರೆ. ಯಾವುದೇ ಮೊದಲ ತಲೆಮಾರಿನ ಶಾಲಾ ಮಕ್ಕಳ ಕುಟುಂಬದವರು ಅಗತ್ಯ ಜೀವನ ಮಟ್ಟವನ್ನು ಹೊಂದಿರುವುದಿಲ್ಲ ಎಂದು ಸಹ ವರದಿ ಹೇಳುತ್ತದೆ. ಬಡ ಜೀವನಮಟ್ಟವು ಮತ್ತು ಅದರೊಡನೆಯೇ ಬರುವ ಜೀವನ ನಿರ್ವಹಣೆಯ ಹೋರಾಟವು ಈ ಕುಟುಂಬಗಳ ಮಕ್ಕಳಿಗೆ ಶಾಲೆಯಲ್ಲಿ ಹಲವಾರು ಮಿತಿಗಳನ್ನು ಮತ್ತು ತಡೆಗಳನ್ನು ತೋರುತ್ತದೆ ಎಂಬುದನ್ನು ಅಲ್ಲಗಳೆಯಲಾಗದು. ಈ

ಮಕ್ಕಳು ದುಡಿಯಲು ಸಮಯ ಹೊಂದಿಸಬೇಕಾಗಬಹುದು, ಪಠ್ಯಪುಸ್ತಕಗಳಿಗೆ, ಬರಹ ಸಾಮಗ್ರಿಗಳಿಗೆ ಹಾಗೂ ಖಾಸಗೀ ಪಾಠಕ್ಕೆ ಹಣ ಇಲ್ಲದಿರಬಹುದು.

ಅಂತಿಮವಾಗಿ, ಶಾಲೆಗೆ ಹೋಗುವ ಮೊದಲ ತಲೆಮಾರಿನ ಮಕ್ಕಳು, ಶಾಲೆಯಲ್ಲಿ ತಮ್ಮ ಜೊತೆಗಾರರಾದ ಇತರ ಅದೃಷ್ಟಶಾಲಿ ಮಕ್ಕಳಿಗಿಂತ ಹೆಚ್ಚು ಪ್ರತಿಕೂಲ ಪರಿಸರವನ್ನು ಎದುರಿಸುತ್ತಾರೆ. ಇವರಲ್ಲಿ ಹೆಚ್ಚಿನ ಮಕ್ಕಳು ಶಿಕ್ಷಕರು ಮತ್ತು ಪ್ರಾಂಶುಪಾಲರುಗಳಿಂದ ಕಡೆಗಣನೆ ಮತ್ತು ನಿರಾಸಕ್ತಿಯನ್ನು ಅನುಭವಿಸುತ್ತಾರೆ ಎಂಬುದನ್ನು ಹಲವಾರು ತುಲನಾತ್ಮಕ ವರದಿಗಳು ತಿಳಿಸುತ್ತವೆ. ಇವು ಅವರ ಸ್ವಾಭಿಮಾನ ಮತ್ತು ಅಪೇಕ್ಷೆಗಳ ಮಟ್ಟವನ್ನು ಕುಗ್ಗಿಸುವುದಲ್ಲದೇ ಶಾಲೆಯಿಂದ ದೊಡ್ಡ ಸಂಖ್ಯೆಯಲ್ಲಿ ಹೊರಗುಳಿಯಲು ಬಹುಮುಖ್ಯ ಕಾರಣಗಳಲ್ಲೊಂದಾಗಿದೆ. ಈ ಮಕ್ಕಳು ಪೋಷಕರಿಂದ ಅಗತ್ಯವೆನಿಸುವ ಶೈಕ್ಷಣಿಕ ಬೆಂಬಲವನ್ನು ಪಡೆಯುವುದಿಲ್ಲ. ಹಾಗಾಗಿ ಶಾಲೆಯಲ್ಲಿ ಉತ್ತಮ ಶಿಕ್ಷಣ ಪಡೆಯಲು ಅಸಾಧ್ಯವಾಗುತ್ತದೆ. ಇವರು ಮುಂದೆ ತಮ್ಮ ಮಕ್ಕಳ ಶಾಲೆಯ ಕಲಿಕೆಗೆ ಬೆಂಬಲ ನೀಡಲು ಅಸಮರ್ಥರಾಗುತ್ತಾರೆ, ಹೀಗೆ ಇದೊಂದು ವಿಷವರ್ತುಲವಾಗಿ ಪರಿಣಮಿಸುತ್ತದೆ. ಹೆಣ್ಣು ಮಕ್ಕಳ ವಿಚಾರದಲ್ಲಿ ಈ ಪರಿಸ್ಥಿತಿ ಮತ್ತೂ ಶೋಚನೀಯವಾಗಿದ್ದು, ಬುಡಕಟ್ಟು ಹೆಣ್ಣುಮಕ್ಕಳು, ಮಹಿಳೆಯರು ಅತೀ ಕಡಿಮೆ ಸಂಖ್ಯೆಯಲ್ಲಿ ಅಕ್ಷರಸ್ಥರಾಗಿರುವುದೇ ಇದಕ್ಕೆ ಸಾಕ್ಷಿ.

ಈ ವಿಷವರ್ತುಲವನ್ನು ತುಂಡರಿಸುವುದು ಹೇಗೆ? ಬಹುತೇಕ ಮೊದಲ ತಲೆಮಾರಿನ ವಿದ್ಯಾರ್ಥಿಗಳಲ್ಲದ ಕುಟುಂಬಗಳಲ್ಲಿ (ಪೋಷಕರು ಅಥವಾ ಅಜ್ಜಿ ತಾತಂದಿರು ಕನಿಷ್ಠ ಪ್ರೌಢಶಿಕ್ಷಣವನ್ನಾದರೂ ಹೊಂದಿರುತ್ತಾರೆ) ಹಿರಿಯರು ಮಕ್ಕಳಿಗೆ ಶಾಲಾ ಶಿಕ್ಷಣಕ್ಕೆ ಅಗತ್ಯವಾದ ಮೂಲ ಕೌಶಲಗಳಾದ ಓದುವುದು, ಲೆಕ್ಕ ಮತ್ತು ಸಂಖ್ಯೆಗಳನ್ನು ಹೇಳಿಕೊಡುತ್ತಾರೆ. ಸಾಮಾನ್ಯವಾಗಿ ಪೋಷಕರಲ್ಲೊಬ್ಬರು ಅಥವಾ ಹಿರಿಯ ಸಂಬಂಧಿಕರು ಮಗುವಿಗೆ ವೈಯಕ್ತಿಕವಾಗಿ ಮನೆಯಲ್ಲಿ ಬೋಧಿಸುವುದರ ಮೂಲಕ ಅಥವಾ ಅಕ್ಷರಗಳನ್ನು ಹೇಳಿಕೊಡುವುದು, ಭಾಷೆಯಲ್ಲಿನ ಅಕ್ಷರಗಳನ್ನು ಗುರುತಿಸಲು ಮತ್ತು ಬರೆಯಲು ಪ್ರೋತ್ಸಾಹಿಸುವುದು, ವಸ್ತುಗಳ ಕಾಗುಣಿತವನ್ನು ಹೇಳಿಕೊಡುವುದು, ಕುಟುಂಬದವರ ಹೆಸರನ್ನು ಹೇಳಿಕೊಡುವುದು ಮುಂತಾದ ರೂಪಗಳಲ್ಲೂ ಕಲಿಸಲಾಗುತ್ತದೆ. ಇದರ ಜೊತೆಗೆ ಪುಸ್ತಕಗಳು, ನಿಯತಕಾಲಿಕೆಗಳು, ಕ್ಯಾಲೆಂಡರ್‌ಗಳಲ್ಲಿರುವ ಮುದ್ರಿತ ಪದಗಳನ್ನು ಪೋಷಕರು ಮತ್ತು ಕುಟುಂಬದ ಇತರರ ಜೊತೆ ಸೇರಿ ಓದುವುದು, ಆಸಕ್ತಿಕರ ಸುದ್ದಿಯ ತುಣುಕುಗಳನ್ನು ಓದುವುದು ಮುಂತಾದವು ಒಳಗೊಂಡಿರುತ್ತವೆ. ಉತ್ತಮವಾದ ವಾತಾವರಣದ ಜೊತೆಗೆ ಪೋಷಕರ ಕಾಳಜಿ ಮತ್ತು ಆರೈಕೆಯಿಂದೊಡಗೂಡಿದ ನಿರಂತರತೆ ಇವು ಯಾವುದೇ ಶಿಕ್ಷಣ ಶಾಸ್ತ್ರೀಯ ರೀತಿಗಳಿಗಿಂತಲೂ ಹೆಚ್ಚಾಗಿ ಮೊದಲ ತಲೆಮಾರಿನದಲ್ಲದ ಮಗು ಶಾಲೆಗೆ ಬರುವುದಕ್ಕೆ ಮುಂಚೆಯೇ ಓದು ಬರಹವನ್ನು ಕಲಿಯುವಂತೆ ಮಾಡುತ್ತದೆ. ಹೀಗಾಗಿ ಈ ಮಗುವು ಮೊದಲ ತಲೆಮಾರಿನ ಮಕ್ಕಳಿಗಿಂತ ಉತ್ತಮ ಪರಿಸ್ಥಿತಿಯಲ್ಲಿ ಇರುತ್ತದೆ. **ಅಗ್ರಗಾಮಿ** ಅನುಭವದಲ್ಲಿ ಎರಡನೇ ತಲೆಮಾರಿನ ಮಗುವೂ ಕೂಡ ಮೊದಲ ತಲೆಮಾರಿನ ಮಗುವಿಗಿಂತ ಉತ್ತಮ ಕಲಿಕೆಯನ್ನು ಹೊಂದಲು ಇದು ಸಹಾಯ ಮಾಡುತ್ತದೆಯಾದ್ದರಿಂದ ಮೊದಲ ತರಗತಿಗಳಲ್ಲಿ ಉತ್ತಮ ಕಲಿಕಾ ಮಟ್ಟವನ್ನು ಹೊಂದಿರುತ್ತದೆ ಎಂಬುವುದನ್ನು 'ಅಗ್ರಗಾಮಿ'ಯ ಅನುಭವಗಳು ಸೂಚಿಸುತ್ತವೆ.

ಮಕ್ಕಳಿಗೆ ಈ ಕೌಶಲಗಳನ್ನು ಕಲಿಸಲು ಹೆಚ್ಚಿನ ಶಿಕ್ಷಕರಿಗೆ ಸರಿಯಾದ ಸಿದ್ಧತೆ ಇರುವುದಿಲ್ಲ. ಬಹಳಷ್ಟು ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ಓದುವುದನ್ನು ಕಲಿಸುವುದಕ್ಕೆ ಅಗತ್ಯವಾದ ಶಿಕ್ಷಣಶಾಸ್ತ್ರದ ವಿಷಯವು ಅತ್ಯಲ್ಪ ಮಟ್ಟದಲ್ಲಿರುತ್ತದೆ. ಮಗುವು ಸುಲಲಿತ ಓದನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವಂತೆ ಶಿಶುವಿಹಾರದ ಅಥವಾ ಒಂದನೇ ತರಗತಿಯ ಪಠ್ಯಪುಸ್ತಕಗಳೂ ವಿನ್ಯಾಸಗೊಂಡಿಲ್ಲ.

ಈ ಎಲ್ಲಾ ವಿಷಯಗಳ ಹಿನ್ನೆಲೆಯಲ್ಲಿ **ಅಗ್ರಗಾಮಿ** ಶಾಲೆಯು ಮೊದಲ ತಲೆಮಾರಿನ ಶಾಲಾ ಮಕ್ಕಳ ಕಲಿಕೆಯನ್ನು ಪ್ರಭಾವಿಸುತ್ತಿರುವ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ಗಮನಹರಿಸಿದೆ. ಮಕ್ಕಳು ಕಲಿಕೆಯಲ್ಲಿ ಹೊಂದಿರುವ ಮಿತಿಗಳು ಮತ್ತು ಎದುರಿಸುತ್ತಿರುವ ಹಲವು ಸವಾಲುಗಳನ್ನು ಶಿಕ್ಷಕರು ಅರ್ಥಮಾಡಿಕೊಳ್ಳುವುದು (ಹಾಜರಾತಿ, ಆರೋಗ್ಯ, ಹಿತಕರ ವಾತಾವರಣ, ಕಲಿಸುವುದರ ಆಶಯಗಳ ಗ್ರಹಿಕೆ, ತೊಡಗಿಸಿಕೊಳ್ಳುವಿಕೆ, ಗಮನ ವಹಿಸುವಿಕೆಗೆ ಒತ್ತು ಇತ್ಯಾದಿ) ಜೊತೆಗೆ ಕಲಿಕೆಯಲ್ಲಿ ಅವರು ಅನುಭವಿಸುತ್ತಿರುವ ತೊಂದರೆಗಳನ್ನು ಗ್ರಹಿಸುವುದು ಮತ್ತು ಇವೆಲ್ಲವನ್ನು ಎದುರಿಸಲು ಅಗತ್ಯವಾದ ರೀತಿ ಮತ್ತು ವಿಧಾನಗಳನ್ನು ಅಭಿವೃದ್ಧಿ–ಪಡಿಸುವುದರೆಡೆಗೆ ಶಿಕ್ಷಣ ಶಾಸ್ತ್ರೀಯ ವಿಧಾನಗಳು ಗಮನಹರಿಸಿವೆ. ಈ ಶಿಕ್ಷಣಶಾಸ್ತ್ರ ವಿಧಾನಗಳು ಸಾಂಪ್ರದಾಯಿಕ ರೀತಿ ಮತ್ತು ವಿಧಾನಗಳನ್ನು ಮೀರಿ ಶಿಕ್ಷಕರು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದನ್ನು ಪ್ರೋತ್ಸಾಹಿಸುತ್ತದೆ, ಜೊತೆಗೆ ಹೊಸ ವಿನೂತನ ದಾರಿಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅಳವಡಿಸಿಕೊಳ್ಳಲು ಅಗತ್ಯವಾದ ಚಿಂತನೆಯ ಬದಲಾವಣೆಗೂ ಸಹಾಯ ಮಾಡುತ್ತದೆ.

ಭಾಷಾ ಶಿಕ್ಷಣದಲ್ಲಿ ಆ ರೀತಿಯ ಒಂದು ಬದಲಾವಣೆ ಸಾಧ್ಯವಾಗಿದೆ. ಶಾಲೆಯಲ್ಲಿ ಭಾಷಾ ಶಿಕ್ಷಣವು ಮಗುವಿಗೆ ಓದುವುದನ್ನು ಕಲಿಸುವುದರ ಮೂಲಕ ಆರಂಭವಾಗುತ್ತದೆ. ರೂಢಿಯಲ್ಲಾದರೆ, ಮಗುವು ಅಕ್ಷರಗಳನ್ನು ಮತ್ತು ಅದರ ವಿವಿಧ ಆಕಾರಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಮೂಲಕ ಆರಂಭವಾಗುತ್ತದೆ. ಮಗುವಿಗೆ ಇದೊಂದು ಸಾಹಸವೇ ಸರಿ. ಅಂದರೆ, ಆಡುವ ಮಾತು ಮತ್ತು ಅಕ್ಷರಗಳ ಜೊತೆಗೆ ಸಮೀಕರಿಸಿಕೊಳ್ಳಲು ಸಾಧ್ಯವಾಗುವವರೆಗೂ, ಸುಮಾರು ಐವತ್ತಕ್ಕೂ ಹೆಚ್ಚು ಚಿಹ್ನೆಗಳನ್ನು ಅದರ ರೂಪ ಮತ್ತು ಶಬ್ದದ ಜೊತೆಗೆ ನೆನಪಿಟ್ಟುಕೊಳ್ಳುವುದಕ್ಕೆ ಅರ್ಥವಿಲ್ಲ. ಮಗುವಿನ ಚಿಂತನಾ ಕೌಶಲಗಳ ಜೊತೆ ಹೊಂದದ ಕಾರಣ ವರ್ಣಮಾಲೆಯ ಬಲವಂತದ ಉರು ಹೊಡೆಯುವಿಕೆಯಿಂದ ಆರಂಭವಾಗುವ ಸಾಕ್ಷರತೆಯ ಕಲಿಕೆಯು ಆರಂಭಿಕ ಶಾಲಾ ಕಲಿಕೆಯ ಹಂತದಲ್ಲೇ ಸೊರಗುತ್ತದೆ. ವರ್ಣಮಾಲೆಯ ಚಿಹ್ನೆಗಳು ಮಗುವಿನ ತಿಳುವಳಿಕೆ ಜೊತೆ ಯಾವುದೇ ಸಂಬಂಧ ಹೊಂದಿರದ ಕಾರಣ ವರ್ಣಮಾಲೆ ಅಥವಾ ವರ್ಣಮಾಲೆ ಕೇಂದ್ರಿತ ವಿಧಾನಗಳ ಮೂಲಕ ಮಗುವಿನ ಓದು ಮತ್ತು ಭಾಷಾ ಕೌಶಲದ ಬೆಳವಣಿಗೆ ನೇತ್ಯಾತ್ಮಕವಾದದ್ದು ಮತ್ತು ಶ್ರಮದ ಕೆಲಸ.

ಸಮಯ ಕಳೆದಂತೆ ಈ ಪದ್ಧತಿಯು ಪರಿಣಾಮಕಾರಿಯಲ್ಲ ಎಂದು ಸಾಬೀತಾದಾಗ, (ಹಲವು ಮಕ್ಕಳ ಹಲವಾರು ವರ್ಷಗಳನ್ನು ಈ ಹೊತ್ತಿಗೆ ಕಳೆದುಕೊಂಡಿದ್ದೆವು) 'ಎ ಫಾರ್ ಆಪಲ್' ಇತ್ಯಾದಿ ರೀತಿಯಂತೆ ಮಕ್ಕಳು ಪದ ಮತ್ತು ಅಕ್ಷರಗಳ ಸಂಬಂಧಗಳ ಮೂಲಕ ಕಲಿಯುವಂತೆ ಬದಲಾವಣೆ ಮಾಡಿಕೊಳ್ಳಲಾಯಿತು. ಇದಕ್ಕೆ ಪೂರಕವಾಗಿ ಧ್ವನಿಲಕ್ಷಣಗಳಲ್ಲಿ ಇಂಗ್ಲಿಷ್‌ಗಿಂತಲೂ ಹೆಚ್ಚು ವಿವರಗಳುಳ್ಳ (ಹೆಚ್ಚು ನಿರ್ದಿಷ್ಟವಾಗಿಯೂ ಇರುವ) ಭಾಷೆಗಳಲ್ಲಿ ಹಲವಾರು ಶಿಶು ಗೀತೆಗಳನ್ನು ಬರೆಯಲಾಗಿದೆ. ಈ ವಿಧಾನದಲ್ಲಿ ಕಲಿಸುವುದು ಬಹಳವೇ ಕಠಿಣವೆಂದು ಶಿಕ್ಷಕರಿಗೆ ತೋರಿದ್ದರಿಂದ ಓದುವುದನ್ನು ಕಲಿಯಲು ಆಗಿಲ್ಲ. ಈ ಪದ್ಧತಿಯಲ್ಲಿ ಕಲಿಕೆಗೆ ನಿರ್ದಿಷ್ಟ ತರ್ಕವೂ ಇಲ್ಲ, ಅಂದರೆ A ಕೇವಲ ಪದದ ಮೊದಲ ಧ್ವನಿಯನ್ನು

ಮಾತ್ರ ಸೂಚಿಸುತ್ತದೆ ಮತ್ತು ಮಗುವು ಒಂದು ಪದದಲ್ಲಿರುವ ಇತರ ಧ್ವನಿಗಳಿಗೆ ಅಕ್ಷರವನ್ನು ಹೊಂದಿಸಿಕೊಳ್ಳಲು ಹೆಣಗುತ್ತದೆ.

ನಂತರದಲ್ಲಿ ಇಡಿಯ ಭಾಷಾ ಕಲಿಕೆಯನ್ನು ಒಟ್ಟಾಗಿ ನೋಡುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಚಿಂತಿಸಿದೆವು. ಮಗು ಶಾಲೆಗೆ ಬರುವ ವೇಳೆಗೆ ಅದಕ್ಕೆ ಒಂದು ಭಾಷೆ ತಿಳಿದಿರುತ್ತದೆ. ಅಂದರೆ ಸುಮಾರು 1500ರಿಂದ 2000ದಷ್ಟು ಪದಸಂಪತ್ತನ್ನು ಆ ಮಗು ಹೊಂದಿರುತ್ತದೆ. ಆದೇಶಗಳಿಂದ ಹಿಡಿದು ಪ್ರಶ್ನೆ, ಭಾವನೆಗಳವರೆಗೆ; ಘಟನೆಗಳ ವಿವರಣೆ, ಕಥೆ ಹೇಳುವುದು ಇತ್ಯಾದಿಗಳ ಮೂಲಕ ಪದಗಳನ್ನು ಆರಿಸಿ ಜೋಡಿಸಲು, ತಿಳಿಹೇಳಲು ಮತ್ತು ಅರ್ಥ ಮಾಡಿಕೊಳ್ಳಲು ಆ ಮಗು ಶಕ್ತವಾಗಿರುತ್ತದೆ. ಮಗುವು ಸರಳ ಹಾಡು ಮತ್ತು ಪದ್ಯಗಳನ್ನು ಅರ್ಥಮಾಡಿಕೊಳ್ಳುತ್ತದೆ, ಹಾಡುತ್ತದೆ ಮತ್ತು ಆನಂದಿಸುತ್ತದೆ, ಭೂತ ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತದೆ, ಅಲ್ಲದೆ ಸಂತೋಷ, ದುಃಖ, ಆನಂದ ಮುಂತಾದ ಅಮೂರ್ತ ಭಾವನೆಗಳನ್ನು ದಾಟಿಸಲು ಸಮರ್ಥವಾಗಿರುತ್ತದೆ. ಕುಟುಂಬದವರ ಮತ್ತು ಗ್ರಾಮಸ್ಥರ ಹೆಸರುಗಳನ್ನು ನೆನಪಿನಲ್ಲಿಡುತ್ತದೆ. ವ್ಯಕ್ತಿ ಹಾಗೂ ಸ್ಥಳಗಳನ್ನು ಗುರುತಿಸಲು ಶಕ್ತವಾಗಿರುತ್ತದೆ. ಈ ಕೌಶಲಗಳು ಪ್ರಾಥಮಿಕ ಅಕ್ಷರ ಕಲಿಕೆ ಅಥವಾ ಓದು ಮತ್ತು ಬರಹಕ್ಕೆ ಅಗತ್ಯವಾಗಿ ಬೇಕಾದ್ದಕ್ಕಿಂತ ಹೆಚ್ಚು ಸಂಕೀರ್ಣವಾದದ್ದು.

ಮಗುವಿನ ಈ ತಿಳಿವು ಮತ್ತು ಸಾಮರ್ಥ್ಯವನ್ನು ಮಗು ಶಾಲೆಗೆ ಬರಲಾರಂಭಿಸಿದ ಮೇಲೆ ಬಳಸಿ ಕಲಿಕೆಯನ್ನು ಬೆಳೆಸಬಹುದೇ ಎಂದು ನಮ್ಮನ್ನೇ ನಾವು ಕೇಳಿಕೊಂಡೆವು. ಅಂದರೆ ಯಾವ ಮಗು ಶಾಲೆ ಆರಂಭಿಸುತ್ತಿದೆಯೋ ಅದು ಸಾಧಾರಣ ಆಕೃತಿಗಳಾದ ಹೂವುಗಳು, ತರಕಾರಿಗಳು ಬರೆಯುವುದರಿಂದ ಮುಂದುವರೆದು ಸ್ಲೇಟಿನ ಮೇಲೆ ಪ್ರಾಸ ಪದ್ಯಗಳನ್ನು, ಕ್ರಿಯಾ ಹಾಡುಗಳನ್ನು, ತನ್ನ ಹೆಸರಿನಿಂದಲೇ ಆರಂಭಿಸಿ ಪರಿಚಿತವಾದ ಹೆಸರುಗಳನ್ನು, ಚಿತ್ರದ ಹೆಸರುಗಳು, ತನ್ನ ಬಗ್ಗೆ, ನಿತ್ಯ ಬದುಕಿನ ವಿಷಯಗಳ ಬಗ್ಗೆ ಸಣ್ಣ ವಾಕ್ಯಗಳು, ಪರಿಚಿತವಾದ ಪದ್ಯಗಳು ಹೀಗೆ ಬರೆಯಲು ಕಲಿಯಬಹುದೇ?. ಮಗುವು ತನ್ನ ಹೆಸರು, ತನ್ನ ಪಾಲಕರ ಹೆಸರು, ತನ್ನ ಒಡಹುಟ್ಟಿದವರ ಹೆಸರು ಹೀಗೆ ನೇರವಾಗಿ ಸಂಬಂಧವಿರುವುದನ್ನು ಬರೆದ ತಕ್ಷಣ ಶಾಲೆಯ ಮತ್ತು ತರಗತಿಯ ಜೊತೆಗೆ ಆತ್ಮೀಯ ಸಂಬಂಧ ಏರ್ಪಡುತ್ತದೆ, ರೋಮಾಂಚನದ ಅನುಭವವಾಗುತ್ತದೆ. ಮಗು ಮನೆಗೆ ಹೋದಮೇಲೆ ಇದನ್ನೆಲ್ಲ ಬರೆದು ತನ್ನ ಕುಟುಂಬದವರಿಗೆ ತೋರಿಸಿದಾಗ ಬರುವ ಉತ್ತಮ ಪ್ರೋತ್ಸಾಹ, ಮೆಚ್ಚುಗೆ ತರಗತಿಯ ಕಲಿಕೆಯನ್ನು ಮತ್ತಷ್ಟು ಹೆಚ್ಚು ಅರ್ಥಪೂರ್ಣಗೊಳಿಸುತ್ತದೆ, ಇಂತಹ ಕಲಿಕೆಗೆ ಮತ್ತೆ ಮತ್ತೆ ತೆರೆದುಕೊಳ್ಳಲು ಹುರಿದುಂಬಿಸುತ್ತಿದೆ.

ಕಿರಿಯ ತರಗತಿಗಳ ಶಿಕ್ಷಕರೊಡನೆ ಈ ವಿಚಾರಗಳ ಬಗ್ಗೆ ಹಲವಾರು ಬಾರಿ ಚರ್ಚೆ ನಡೆಸಲಾಯಿತು. ಮಕ್ಕಳಿಗೆ ಅರ್ಥಪೂರ್ಣ ಓದು–ಬರಹ ಕಲಿಸುವಲ್ಲಿನ ಸವಾಲುಗಳು, ಅದಕ್ಕೆ ಕಾರಣಗಳು, ಪ್ರತಿಕ್ರಿಯೆಗಳು ಮತ್ತು ಬುಡಕಟ್ಟು ಮಕ್ಕಳು ಶಾಲೆಗೆ ಬಂದಾಗ ಎದುರಿಸುವ ಭಾಷಾ ಸಮಸ್ಯೆಗಳು ಹೀಗೆ ಹಲವು ವಿಚಾರಗಳು ಕೆಲವು ತಿಂಗಳುಗಳ ಕಾಲದ ಔಪಚಾರಿಕ ಮತ್ತು ಅನೌಪಚಾರಿಕ ಚರ್ಚೆಗಳ ವಿಷಯವಾದವು. ಮಕ್ಕಳಿಗೆ ಕಂಠಪಾಠಕ್ಕಿಂತ ಪರಿಚಿತ ಪದಗಳ ಮೂಲಕ ಕಲಿಯಲು ಅನುವಾಗುವಂತೆ ಶಿಕ್ಷಕರು ಪದಭಂಡಾರ ಹಾಗೂ ಬೋಧನಾ ಸಾಮಗ್ರಿಗಳನ್ನು ತಯಾರಿಸಿಕೊಂಡರು.

ಆದರೂ ತರಗತಿಗಳಲ್ಲಿ ಶಿಕ್ಷಕರು ಸಾಂಪ್ರದಾಯಿಕವಾದ ಅಕ್ಷರ ಕೇಂದ್ರಿತ ಪದ್ಧತಿಗಳಿಗೆ ಶರಣು ಹೋದ ಕಾರಣ ಸಣ್ಣ ಮಟ್ಟಿನ ಬದಲಾವಣೆ ಸಾಧ್ಯವಾಯಿತಷ್ಟೇ. ಇಷ್ಟೆಲ್ಲಾ ಸಂವಾದಗಳು ಮತ್ತು ಅರ್ಥ ಗ್ರಹಿಕೆಯ ನಂತರವೂ ಹೆಚ್ಚಿನ ಸೃಜನಾತ್ಮಕ, ಮಗುಕೇಂದ್ರಿತ ವಿಧಾನಕ್ಕೆ ಬದಲಾಗಲು ಅಷ್ಟೊಂದು ಕಷ್ಟವೇಕೆ? ಶಿಕ್ಷಕರಿಗೆ ಮಕ್ಕಳನ್ನು ಈ ಪದ್ಧತಿಯ ಪ್ರಕಾರ ತೊಡಗಿಸಿಕೊಳ್ಳಲು ಅಗತ್ಯವಾದ ಸಂಪನ್ಮೂಲಗಳು ಸಾಕಷ್ಟು ದೊರಕಲಿಲ್ಲ ಎನ್ನುವುದನ್ನು ಕಂಡುಕೊಳ್ಳಲಾಯಿತು. ಹಾಗಾಗಿಯೇ ಅವರು ಉರು ಹೊಡೆಯುವುದಕ್ಕೇ ಹಿಂದಿರುಗಬೇಕಾಯಿತು. ಮೊದಲಿಗೆ ಅಕ್ಷರಗಳನ್ನು ಕಲಿಯದೆಯೇ ಮಕ್ಕಳಿಗೆ ಕಲಿಯಲು ಸಾಧ್ಯ ಎಂಬುದನ್ನು ನಂಬಲು ಕೆಲವು ಶಿಕ್ಷಕರು ಸಿದ್ಧರಿರಲಿಲ್ಲ. ಕೆಲವು ತರಗತಿಗಳಲ್ಲಿ ಎರಡು ಭಾಷೆಯ ಮಕ್ಕಳಿದ್ದರೂ ಅದರಲ್ಲಿ ಅರ್ಧದಷ್ಟು ಮಕ್ಕಳು ಬುಡಕಟ್ಟು ಭಾಷೆಯನ್ನು ಮಾತನಾಡುತ್ತಿದ್ದರು ಹಾಗೂ ರಾಜ್ಯಭಾಷೆಯಾದ ಒಡಿಯಾವನ್ನು ಅರ್ಥವೂ ಮಾಡಿಕೊಳ್ಳಲಾಗುತ್ತಿರಲಿಲ್ಲ.

ಈ ಸಂವಾದಗಳ ನಂತರ, ಎಲ್ಲರೂ ಜೊತೆಗೂಡಿ ಹೆಚ್ಚು ಮಗುಕೇಂದ್ರಿತವಾದ ಪಾಠ ಕ್ರಮಕ್ಕೆ ಬದಲಾಗಲು ನೆರವಾಗುವಂಥ ಒಂದು ಪುಸ್ತಕವನ್ನು ರೂಪಿಸಿದರು. ಇದರೊಟ್ಟಿಗೆ ಬುಡಕಟ್ಟು ಮಕ್ಕಳು ಇದ್ದ ತರಗತಿಗಳಲ್ಲಿ ಕಲಿಸಲು (ಬುಡಕಟ್ಟು ಭಾಷೆಯು ಮೊದಲ ಭಾಷೆಯಾಗಿದ್ದ) ಶಿಕ್ಷಕರನ್ನು ನೇಮಿಸಲಾಯಿತು. ಶಿಕ್ಷಕರು ತಾವು ಹೇಗೆ ಪುಸ್ತಕವನ್ನು ಬಳಸುತ್ತಾರೆ, ವಿವಿಧ ಮಾತೃಭಾಷೆಯ ಮಕ್ಕಳಿಗೆ ಪದ ಮತ್ತು ಚಿತ್ರದ ಆಟಗಳ ಮೂಲಕ ಹೇಗೆ ನೆರವಾದರೆಂದು ಹಲವಾರು ತರಬೇತಿ ಕಾರ್ಯಕ್ರಮಗಳಲ್ಲಿ ಶಿಕ್ಷಕರು ಹಂಚಿಕೊಂಡರು.

ಜೊತೆಗೆ ತರಗತಿ ಕೊಠಡಿಯ ಸಮಸ್ಯೆಗಳನ್ನೂ ಚರ್ಚಿಸಲಾಯಿತು. ಈ ಸಂವಾದಗಳು ಮಕ್ಕಳೊಳಗೇ ಇರುವ ಸಂಪನ್ಮೂಲಗಳನ್ನು ಗುರುತಿಸಲು ಸಹಾಯ ಮಾಡಿದವು. ಮಕ್ಕಳು ಒಬ್ಬರಿಗೊಬ್ಬರು ಸಹಾಯ ಮಾಡಲು ತೋರುವ ಉತ್ಸುಕತೆ ಉದಾಹರಣೆಗೆ ತನ್ನ ಕೆಲಸ ಮುಗಿದ ನಂತರ ಮಗುವು ಜೊತೆಗಾರರಿಗೆ ಸಹಾಯ ಮಾಡಲು ತೊಡಗುವಂಥ ತಾವು ಮಕ್ಕಳಲ್ಲಿ ಗಮನಿಸಿದ ಕೆಲ ವಿಚಾರಗಳನ್ನು ಶಿಕ್ಷಕರು ಹಂಚಿಕೊಂಡರು. ಅಲ್ಲದೆ ಅವರು ಜೊತೆಗಾರರಿಂದ ಕಲಿಯಲು ಹೆಚ್ಚು ಆಸಕ್ತರಾಗಿದ್ದರು ಮತ್ತು ತಮ್ಮ ಶಿಕ್ಷಕರಿಗಿಂತಲೂ ಮಿಗಿಲಾಗಿ ತಮ್ಮ ಜೊತೆಗಾರರ ಮಾತುಗಳನ್ನು ಹೆಚ್ಚಾಗಿ ಆಲಿಸಿದರು! ಈ ಸಂವಾದಗಳು ಮಕ್ಕಳನ್ನು ಹೆಚ್ಚು ಅರಿತುಕೊಳ್ಳಲು, ನಮ್ಮ ಅಧ್ಯಾಪನ ಮತ್ತು ಬೋಧನಾ ಸಾಮಗ್ರಿಗಳನ್ನು ಸುಧಾರಿಸಲು ನೆರವಾದವು. ಮೇಲಿನ ಮೊದಲ ಪುಸ್ತಕದ ನಂತರದಲ್ಲಿ ಕ್ರಿಯಾಪುಸ್ತಕ ಮಾರ್ಗದರ್ಶಿಯನ್ನು ವಿನ್ಯಾಸಗೊಳಿಸಲಾಯಿತು. ಈ ಪುಸ್ತಕವು ಮಕ್ಕಳು ರಚನಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ತೊಡಗಿಕೊಳ್ಳಲು ಮತ್ತು ಹಂತಹಂತವಾಗಿ ಅಕ್ಷರ ಜ್ಞಾನ ಮತ್ತು ಓದುವುದಕ್ಕೆ ಅನುವಾಗುವಂಥ ಚಟುವಟಿಕೆಗಳನ್ನು ಮಕ್ಕಳಿಗೆ ಮಾಡಿಸಲು ಶಿಕ್ಷಕರಿಗೆ ಸಹಾಯ ನೀಡಿತು.

ಒಂದನೇ ತರಗತಿಯ ಮಕ್ಕಳಿಗೂ ನೀಡಿದ ಸಚಿತ್ರ ಕ್ರಿಯಾಪುಸ್ತಕ ಮಾರ್ಗದರ್ಶಿಯು ಮಕ್ಕಳಿಗೆ ಬಹಳ ಆಕರ್ಷಣೀಯವಾಗಿತ್ತು. ಬಣ್ಣ ತುಂಬುವುದು, ಚಿತ್ರಗಳನ್ನು ಬರೆಯುವುದು, ಪದಗಳ ಆಟ ಇವುಗಳಿಂದ ಕೂಡಿದ ಪುಸ್ತಕವು ಮಕ್ಕಳನ್ನು ಕ್ಷಣದಲ್ಲಿ ಹಿಡಿದಿಟ್ಟುಕೊಂಡು ಹೆಚ್ಚು ರಚನಾತ್ಮಕ ರೀತಿಯಲ್ಲಿ ಪ್ರೇರೇಪಿಸಿತು. ಈ ಪುಸ್ತಕವು ಮುಂದಿನ ಆಟಗಳಿಗೆ, ಸಮಸ್ಯೆಗಳ ನಿವಾರಣೆಗೆ ಮತ್ತು ಕಪ್ಪು ಹಲಗೆಯ ಚಟುವಟಿಕೆಗಳನ್ನು ವಿನ್ಯಾಸ ಮಾಡಲು ಸಹಾಯ

ಮಾಡಿತು. ಈ ಪುಸ್ತಕದಲ್ಲಿದ್ದ ಚಟುವಟಿಕೆಗಳನ್ನು ಮಾಡಲು ಮಕ್ಕಳಿಗೆ ಎರಡು ವರ್ಷಗಳ ಅವಧಿ ಬೇಕಾಗುತ್ತದೆ ಮತ್ತು ಕೊನೆಗೆ ಮಕ್ಕಳು ಓದುವುದರ ಮೂಲಕ ಕೌಶಲವನ್ನು ಹೊಂದುತ್ತಾರೆ ಎಂಬುದು ಶಿಕ್ಷಕರಿಗೆ ತಿಳಿಯಿತು. ಮುಂದಿನ ತರಗತಿಗಳಲ್ಲಿ ಜೋರಾಗಿ ಓದುವುದು ಕಪ್ಪುಹಲಗೆಯ ಮೂಲಕ ಓದು ಹಾಗೂ ಅರ್ಥಗ್ರಹಿಕೆಯ ಅಭ್ಯಾಸ ಮತ್ತು ಓದುವಿಕೆಯ ಮೂಲಕ ಮಕ್ಕಳ ಓದು ಹಂತಹಂತವಾಗಿ ಹೆಚ್ಚಿಸುವಂತೆ ಮಾಡಲಾಯಿತು.

> ಎಲ್ಲ ಮಕ್ಕಳೂ ಒಂದೇ ವೇಗದಲ್ಲಿ ಕಲಿಯಲಾರರು. **ಅಗ್ರಗಾಮಿ** ಶಾಲೆಯಲ್ಲಿ ಪ್ರತಿ ಮಗುವೂ ತನ್ನ ವೇಗದಲ್ಲೇ ಕಲಿಯಲು ಮತ್ತು ಮೇಲೆ ಹೇಳಿದಂತೆ, ತಮ್ಮ ಜೊತೆಗಾರರು ಕಲಿಯಲೂ ಸಹಾಯ ಮಾಡಲು ಉತ್ತೇಜಿಸಲಾಗುತ್ತದೆ. ಯಾವ ಮಗುವೂ ಹೊರಗುಳಿಯದಂತಹ ಸಮೂಹ ಪರಿಶ್ರಮದ ಒಂದು ಪರಿಸರವನ್ನು ಇದು ಸೃಷ್ಟಿಸುತ್ತದೆ. ಇಲ್ಲಿ ಶಿಕ್ಷಕರು ಮಕ್ಕಳಿಗೆ ಪಾಠವನ್ನು ವಿವರಿಸುವುದರ ಬದಲಿಗೆ, ಪ್ರಶ್ನೆಗಳನ್ನು ಕೇಳುವ ಮೂಲಕ ಪುಸ್ತಕದಲ್ಲಿರುವ ಪಾಠವನ್ನು ಅರ್ಥ ಮಾಡಿಕೊಳ್ಳಲು, ಪದಗಳನ್ನು ಗುರುತಿಸುವ ಮೂಲಕ, ಪ್ಯಾರಾಗಳ ಪ್ರಕಾರ ದೃಶ್ಯ ಸ್ಮರಣೆಯನ್ನು ಪರೀಕ್ಷಿಸುವ ಅಭ್ಯಾಸಗಳು, ಮಕ್ಕಳು ಓದುವುದು ಮತ್ತು ಶಿಕ್ಷಕರು ಹೇಳಿದ ಪದಗಳನ್ನು ತಕ್ಷಣ ಮಕ್ಕಳು ಗುರುತಿಸುವುದು, ಸ್ವಯಂ ಓದು ಮುಂತಾದವುಗಳ ಮೂಲಕ ಕಲಿಕೆಗೆ ಸಹಾಯ ಮಾಡಲಾಗುತ್ತದೆ.

ಅಗ್ರಗಾಮಿ ಶಾಲೆಯ ಮಕ್ಕಳಲ್ಲಿ ಒಂದು ಮತ್ತು ಎರಡನೇ ತರಗತಿಯಿಂದಲೇ ಸರಳ ಮತ್ತು ಮೋಜಿನ ವಿಧಾನಗಳ ಮೂಲಕ ಓದುವ ಮತ್ತು ಭಾಷಾ ಕೌಶಲಗಳನ್ನು ಬೆಳೆಸಲು ಈ ಎಲ್ಲವೂ ಸಹಾಯ ಮಾಡಿದೆ. ಹೀಗೆ, ತಮ್ಮ ಆಯ್ಕೆಯ ಮತ್ತು ತಮ್ಮ ಆಸಕ್ತಿಯ ವಿಷಯಗಳನ್ನು ಓದುವುದರಲ್ಲಿ ಸಂತೋಷವಿದೆ ಎಂದು ಅರಿತಾಗ ಮಕ್ಕಳು ಎಲ್ಲ ವಿಷಯಗಳನ್ನು ಉತ್ಸಾಹದಿಂದ ಕಲಿಯುವವರಾಗಿದ್ದಾರೆ. ಇದೇ ಹೊತ್ತಿಗೆ ಅವರೆಲ್ಲರೂ ಉತ್ಸುಕ ಬರಹಗಾರರಾಗಿದ್ದು, ತಮ್ಮನ್ನು ಪ್ರಕಟಪಡಿಸಲು ಉತ್ಸುಕರಾಗಿದ್ದು ಶಾಲೆಯ ಜೀವನದ ಘಟನೆಗಳು ಮತ್ತು ಅನುಭವಗಳ ಬಗ್ಗೆ ವಾರ್ಷಿಕ ವರದಿ ಮತ್ತು ವಾರ್ತಾಪತ್ರಗಳಲ್ಲಿ ಬರೆಯುತ್ತಾರೆ. **ಡಂಗಾರ್ ಕಥಾ** ಎಂದು ಹೆಸರಿಸಿರುವ ವಾರ್ತಾ ಪತ್ರದಲ್ಲಿ ಮಕ್ಕಳ ಹಳ್ಳಿಯ ಬದುಕು, ಅವರ ಕಲ್ಪನೆಗಳು ಮತ್ತು ಅವರ ಆಶಯ ಮತ್ತು ಕಲ್ಪನೆಯ ಭವಿಷ್ಯ ಇವುಗಳ ಬಗ್ಗೆ ಸ್ಥೂಲ ನೋಟ ಇರುತ್ತದೆ. ಶಿಕ್ಷಕರ ಸಲಹೆಯ ಮೇರೆಗೆ ವರ್ಣರಂಜಿತ, ಆಕರ್ಷಕ ಚಿತ್ರಗಳ ಮೂಲಕ ತಮ್ಮ ಬರಹಗಳನ್ನು ಚಿತ್ರಿಸಲು ಆರಂಭಿಸಿದ್ದಾರೆ. ಚಿತ್ರ ಬರೆಯುವ ವಿಷಯದಲ್ಲಿ ಹೆಚ್ಚಿನ ಬೋಧನೆ ಇಲ್ಲದೆ ಕೇವಲ ಅವರ ಕಲ್ಪನೆಗಳು ಮುಕ್ತವಾಗಿ ಚಿತ್ರಿತವಾಗಲು ಅನುವು ಮಾಡಿಕೊಟ್ಟಿರುವುದರಿಂದಲೇ **ಅಗ್ರಗಾಮಿ** ಶಾಲೆಯ ಮಕ್ಕಳ ಕಲ್ಪನೆಗಳು ಮತ್ತು ಚಿತ್ರ ಬರೆಯುವ ಕಲೆ ಅರಳಿವೆ ಎಂದು ಹೇಳಲು ಹೆಮ್ಮೆಯಾಗುತ್ತದೆ.

ಅಗ್ರಗಾಮಿ ಶಾಲೆಯ ನಮ್ಮ ಈ ಅನುಭವಗಳು ನಮಗೆ ಸರ್ಕಾರೀ ಶಾಲೆಗಳೊಡನೆ ತೊಡಗಿಸಿಕೊಳ್ಳಲೂ ಸಹಾಯ ಮಾಡಿವೆ. ಈ ರೀತಿ ಮತ್ತು ವಿಧಾನಗಳಲ್ಲಿ ತರಬೇತಾದ ಯುವಕರನ್ನು ಹದಿನೆಂಟು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಆರಂಭಿಕ ತರಗತಿಗಳಲ್ಲಿನ ಕಲಿಕೆಯನ್ನು ಹೆಚ್ಚಿಸುವ ದೃಷ್ಟಿಯಿಂದ ನಿಯೋಜಿಸಲಾಯಿತು. ಹಿಂದಿನ ಅನುಭವದ ಪ್ರಕಾರ ಮೂಲ ಪರಿಕಲ್ಪನೆಗಳ ಅರ್ಥೈಸುವಿಕೆ ಮತ್ತು ತರಬೇತಿಗೆ ಹೆಚ್ಚಿನ ಗಮನ ನೀಡಲಾಯಿತು. ಮಕ್ಕಳು ಮತ್ತು ತರಬೇತಿ ನಿರತರಿಗೆ ಕ್ರಿಯಾಪುಸ್ತಕ ಮಾರ್ಗದರ್ಶಿಯನ್ನು ನೀಡಲಾಯಿತು. ಜೊತೆಗೆ **ಅಗ್ರಗಾಮಿ** ಶಾಲೆಗಳಲ್ಲಿ ಆರಂಭಿಕ ತರಗತಿಗಳ ಬೋಧನೆಯ ಬಗ್ಗೆ ಹಲವು ಅವಲೋಕನ ಸಭೆಗಳನ್ನು ನಡೆಸಲಾಯಿತು. ಒಡಿಶಾದ ಮೂರು ಬುಡಕಟ್ಟು ಜಿಲ್ಲೆಗಳಾದ ಕೋರಾಪುಟ್, ರಾಯಗಢ ಮತ್ತು ನಬ್‌ರಂಗ್‌ಪುರಗಳಲ್ಲಿ ಎರಡು ವರ್ಷಗಳ ಪರಿಶ್ರಮದ ಫಲವಾಗಿ ಅದ್ಭುತ ಫಲಿತಾಂಶಗಳನ್ನು ನೀಡಿದವು. ಎರಡನೇ ತರಗತಿಯ ಕೊನೆಯ ವೇಳೆಗೆ ಸುಮಾರು ಶೇಕಡಾ ೬೦ರಷ್ಟು ಮಕ್ಕಳು ಓದಬಲ್ಲವರಾಗಿದ್ದರು ಎಂದು ಸ್ವತಂತ್ರ ಅಧ್ಯಯನಗಳು ತಿಳಿಸುತ್ತಿವೆ.

ಈ ಅನುಭವವು ನಮಗೆ ಬಹಳ ದೊಡ್ಡ ಕಲಿಕೆಯ ವ್ಯಾಪ್ತಿಯನ್ನು ನೀಡಿದೆಯಾದರೂ, ನಾವು ಶಿಕ್ಷಕರಿಗೆ ಬೆಂಬಲ ಮತ್ತು ಪರಿಣಾಮಕಾರಿ ತರಬೇತಿ ನೀಡುವ ವಿಚಾರಕ್ಕೆ ಹೆಚ್ಚು ಒತ್ತು ನೀಡಬೇಕಾಗಿದೆ. ಶಿಕ್ಷಕರ ಮಾತುಗಳನ್ನು ಆಲಿಸುವುದು, ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಪರಿಹಾರದೆಡೆಗೆ ಅವರು ಮುಂದುವರೆಯಲು ಅವರಿಗೆ ಅಗತ್ಯ ಬೆಂಬಲ ನೀಡುವುದು ಇವುಗಳು ತುಂಬಾ ಮುಖ್ಯ. ಸರ್ಕಾರಿ ವ್ಯವಸ್ಥೆಯಲ್ಲಿ ಶಿಕ್ಷಕರು ಅಧೀನರು, ಸೇವಾ ನಿಯಮಗಳನ್ನು ಅನುಸರಿಸಬೇಕು ಮತ್ತು ಮೇಲಧಿಕಾರಿಗಳ ಆಜ್ಞೆಯನ್ನು ಪಾಲಿಸಬೇಕು. ಉತ್ತಮ ಬೋಧನಾ ವಿಧಾನಗಳನ್ನು ಅಭಿವೃದ್ಧಿಪಡಿಸಿ ಕಲಿಕಾ ಫಲಿತಗಳನ್ನು ಉತ್ತಮ ಪಡಿಸಲು ಇದೇ ಬಲು ದೊಡ್ಡ ಅಡಚಣೆಯಾಗಿದೆ. ಇವುಗಳನ್ನೂ ದಾಟಿ ಸರ್ಕಾರೀ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಜ್ಞಾನ ಮತ್ತು ಕೌಶಲಗಳೊಂದಿಗೆ ಸೃಜನಾತ್ಮಕ ನೆಲೆಗಳನ್ನು ಮುಟ್ಟಲು ಸಹಾಯ ಮಾಡಬೇಕಿದೆ. ಇಂದಿನ ನಮ್ಮ ವ್ಯವಸ್ಥೆಯನ್ನು ಗಮನಿಸಿದರೆ ಇದೊಂದು ಅಸಾಧ್ಯ ಕೆಲಸವೇ ಎನಿಸಬಹುದು. ಆದರೆ, ಸಣ್ಣ ಪ್ರಮಾಣದಲ್ಲಿ ಆರಂಭಿಸಿ ನಮ್ಮ ಸಾಧನೆ ಮತ್ತು ಹರಹುಗಳನ್ನು ವಿಸ್ತರಿಸುತ್ತಾ ಹೋದರೆ, ಸರ್ವರಿಗೂ ಗುಣಮಟ್ಟದ ಶಿಕ್ಷಣದೆಡೆಗೆ ಮುನ್ನಡೆಯಬಹುದೇನೋ.



ವಿದ್ಯಾ ದಾಸ್ ಅವರು ಸ್ವಯಂಸೇವಾ ಸಂಸ್ಥೆ ಅಗ್ರಗಾಮಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳಾ ಹಕ್ಕುಗಳು, ಜೀವನಮಟ್ಟ, ಶಿಕ್ಷಣ ಕ್ಷೇತ್ರಗಳಲ್ಲಿ ಇವರ ಕಾರ್ಯಗಳಿಗಾಗಿ ಗುರುತಿಸಲಾಗುತ್ತದೆ. ಬುಡಕಟ್ಟು ಶಿಕ್ಷಣ ಮತ್ತು ಬುಡಕಟ್ಟು ಹಕ್ಕುಗಳ ಕುರಿತು ಇವರ ಹಲವು ಬರಹಗಳು ಪ್ರಕಟಗೊಂಡಿವೆ. 'ಅಗ್ರಗಾಮಿ'ಯ ದೂರದೃಷ್ಟಿಯಂತೆ ಅವರು ಹಸಿವು ಮತ್ತು ಅನ್ಯಾಯವಿಲ್ಲದ ಸಮಾಜ ನಿರ್ಮಾಣದ ನಿಟ್ಟಿನಲ್ಲಿ ಸಕ್ರಿಯರಾಗಿದ್ದಾರೆ. ವಿದ್ಯಾ ದಾಸ್ ಅವರನ್ನು ಇಲ್ಲಿ vidhyadas@agragamee.org ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಚನ್ನಗಿರಿ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**